
# ಪವಿತ್ರ ಪರ್ವತ ಅಥೋಸ್

## ಸ್ವಾಮಿ ಗಣೇಶಾನಂದ



ಪ್ರಾಕೃತಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಅತ್ಯಂತ ಭವ್ಯ ಮತ್ತು ಸುಂದರ ಪ್ರದೇಶ ಮೌಂಟ್ ಅಥೋಸ್. ೧೯೭೭ರಲ್ಲಿ ಈ ಪರ್ವತಕ್ಕೆ ಭೇಟಿನೀಡಿ ಅಲ್ಲಿಯ ಸಾಧುಗಳ ಜೀವನ ವಿಧಾನವನ್ನು ಪರಿಚಯ ಮಾಡಿಕೊಟ್ಟಿರುವ ಸ್ವಾಮಿ ಗಣೇಶಾನಂದರು ಈಗ ಅಮೇರಿಕಾದ ಸಂತ ಬರ್ಬರಾದಲ್ಲಿರುವ ರಾಮಕೃಷ್ಣ ಮಿಷನ್ನಿಗೆ ಸೇರಿದ ವೇದಾಂತ ಕೇಂದ್ರದಲ್ಲಿರುವರು. 'ಪ್ರಬುದ್ಧ ಭಾರತ'ದ ೧೯೮೦ ಮಾರ್ಚ್ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಪ್ರವಾಸ ಲೇಖನದ ಸಂಗ್ರಹಾನುವಾದವನ್ನು ಮಾಡಿದವರು ಬ್ರ.ವಿವಿಕ್ತಚೈತನ್ಯ.

### ದರ್ಶನದ ಬಯಕೆ

**ಅಮೇರಿಕಾದಲ್ಲಿರುವ** ರಾಮಕೃಷ್ಣ ಮಹಾಸಂಘದ ಹಾಲಿವುಡ್ ಕೇಂದ್ರಕ್ಕೆ ಸೇರಿದ ಟ್ರಾಬುಕೋ ಕ್ಯಾನೋನ್‌ನಲ್ಲಿರುವ ಸಂನ್ಯಾಸಿ ಮಠದ ಸದಸ್ಯ ನಾನು. ಪರ್ವತಶಿಖರವೊಂದರ ಬುಡದಲ್ಲಿರುವ ಆ ಮಠ ನಿರ್ಜನವಾಗಿದೆ. ಆಧ್ಯಾತ್ಮಿಕ ಸಾಧನೆಗೆ ಹೇಳಿ ಮಾಡಿಸಿದ ಏಕಾಂತ ತಾಣವಾಗಿದೆ. ಆ ನಿಶ್ಶಬ್ದ ಪರಿಸರದಲ್ಲಿ, ಒಂದು ಸಂಜೆ, ಅಥೋಸ್ ಪರ್ವತದ ಚಿತ್ರಗಳಿರುವ ದೊಡ್ಡ ಪುಸ್ತಕವೊಂದನ್ನು ನಾನು ಕಂಡೆ. ಸಂನ್ಯಾಸಿಗಳ ಕೋಟೆಯಂತಿರುವ ಮಠಗಳು ಕಡಿದಾದ ಪರ್ವತಶ್ರೇಣಿಯ ಎತ್ತರ ಭಾಗಗಳುದ್ದಕ್ಕೂ ಹರಡಿರುವ ಪರಿಯನ್ನು ಕಂಡು ಮೋಹಗೊಂಡೆ. ಅಲ್ಲಿ ಸುಮಾರು ಸಾವಿರವರ್ಷಗಳಿಂದ ಭಗವಂತನನ್ನೇ ತಮ್ಮ ಬಾಳಿನ ಕೇಂದ್ರವಾಗಿಟ್ಟುಕೊಂಡು ಪ್ರಾರ್ಥನೆ, ನಿಃಸ್ವಾರ್ಥಸೇವೆ ಹಾಗೂ ತಪಸ್ಸುಗಳ ದಿವ್ಯಜೀವನವನ್ನು ಬಾಳುತ್ತಿರುವ ಪೌರಸ್ತ್ಯ ಸಾಂಪ್ರದಾಯಿಕ ಚರ್ಚ್‌ನ ಸಂನ್ಯಾಸಿಗಳ ರೋಮಾಂಚಕಾರಿ ಕಥನವನ್ನು ಓದಿ ಪುಳಕಿತನಾದೆ. ಕಳೆದ ಸಾವಿರ ವರ್ಷಗಳಿಂದ ಸ್ತ್ರೀಯರಿಗೆ ನಿಷಿದ್ಧವಾದ ಪ್ರದೇಶ ಇದು. ಆ ಪುಣ್ಯಕ್ಷೇತ್ರದ ದರ್ಶನವನ್ನು ಪಡೆಯುವ ಬಯಕೆ ನನ್ನ ಮನದಾಳದಲ್ಲಿ ಮೂಡಿತು. ಅದು ಕೈಗೂಡಿದ್ದು ಹಲವಾರು ವರ್ಷಗಳ ನಂತರ. ನಾನು ಭಾರತದ ಪ್ರಯಾಣ ಮುಗಿಸಿ ಅಮೇರಿಕಾಕ್ಕೆ ಮರಳಿಬರುತ್ತಿರುವ ಸಮಯದಲ್ಲಿ. ಹೇಗೋ ನನ್ನ ಪ್ರಯಾಣ ಮಾರ್ಗದಲ್ಲಿ ಗ್ರೀಸ್ ಅನ್ನೂ ಸೇರಿಸಿಕೊಂಡೆ. ಭಗವಂತನ ಕೃಪೆಯಿಂದ ನನ್ನ ಹಳೆಯ ಕನಸು ನನಸಾಗುವ ಸಮಯ ಒದಗಿ ಒಂದಿತ್ತು.

### ಅಥೋಸಿನೆಡೆಗೆ ಪ್ರಯಾಣ

ಒಳ್ಳೆಯ ಕಾರ್ಯಗಳಿಗೆ ವಿಘ್ನಗಳು ಅಧಿಕ. ಅಥೋಸ್ ಪರ್ವತಕ್ಕೆ ಹೋಗುವುದು ಅಷ್ಟು ಸುಲಭವಲ್ಲ. ಮೊದಲು ಗ್ರೀಕ್ ಸರ್ಕಾರದ ಶಿಕ್ಷಣ ಮತ್ತು ವಿದೇಶಾಂಗ ಖಾತೆಯಿಂದ ಪರವಾನಗಿ ಪಡೆಯಬೇಕು. ನಂತರ ಅಥೋಸ್‌ನ ಅಧಿಕಾರಿಗಳಿಗಾಗಿ ಪರಿಚಯ ಪತ್ರವೊಂದು ಆವಶ್ಯಕ. ಅಷ್ಟೇ ಅಲ್ಲ, ಪವಿತ್ರ ಪರ್ವತವನ್ನು ದರ್ಶಿಸಲು ನಾಲ್ಕು ದಿನಗಳ ಮಟ್ಟಿಗೆ ಅವಕಾಶವೀಯುವ ವಿಶೇಷ ಪಾಸ್‌ಪೋರ್ಟ್ ಅನ್ನೂ ದೊರಕಿಸಿಕೊಳ್ಳಬೇಕು. ಇದನ್ನು ಕೇಳಿ ನನ್ನ ತಲೆ ಸುತ್ತತೊಡಗಿತು. ಆದರೆ, ಅದೃಷ್ಟವಶಾತ್ ಅಮೇರಿಕಾದಲ್ಲಿರುವ ನನ್ನ ಗ್ರೀಕ್ ವೈದ್ಯ ಮಿತ್ರರೊಬ್ಬರಿಂದ ಪರಿಚಯ ಪತ್ರವೊಂದನ್ನು ತಂದಿದ್ದೆ. ಅವರ ಸಲಹೆಯ ಪ್ರಕಾರ ಪಾಟ್ ಮೋಸ್(*Patmos*) ಎಂಬ ಸಣ್ಣ ದ್ವೀಪದಲ್ಲಿರುವ ದೇವಶಾಸ್ತ್ರಜ್ಞ ಸಂತ ಜಾನನ ಮಠದ (*Monastery of St.Jhon, the Theologian*) ಮಹಂತರನ್ನು (*Abbot*) ಭೇಟಿಯಾಗಲು ತೆರಳಿದೆ.

ಈ ಮಠವನ್ನು ತೋರಿಸಿ ವಿವರಿಸಿದ ಭದ್ರಮಹಿಳೆಗೆ ಅಥೋಸ್ ಪರ್ವತವನ್ನು ನೋಡಬೇಕೆಂಬ ನನ್ನ ಬಯಕೆಯನ್ನು ತೋಡಿಕೊಂಡೆ. ಆಕೆ ಆ ಮಠದ ಮಹಂತರಾದ ಫಾದರ್ ಸಿಡ್ರೋಸ್ ಅವರ ಬಳಿ ಕರೆದೊಯ್ದರು. ನನ್ನ ವೃತ್ತಾಂತವನ್ನು ಆಕೆಯಿಂದ ಆಲಿಸಿ, ನಾನು ಕೊಟ್ಟ ಪರಿಚಯ ಪತ್ರದಿಂದ ಸಂತುಷ್ಟರಾದ ಆ ಪೂಜ್ಯರು ಮರುದಿನ ಅಥೋಸಿನ ಅಧಿಕಾರಿಗಳಿಗೆ ಒಂದು ಕಾಗದವನ್ನು ಬರೆದುಕೊಟ್ಟರು. ಅನಂತರ ಅಮೇರಿಕಾ ದೂತಾವಾಸದಿಂದ



ಶೀರ್ಷಿಕೆಯ ಚಿತ್ರ: ಅಥೋಸ್ ಪರ್ವತದ ರಮಣೀಯ ದೃಶ್ಯ ಮತ್ತು ಮುಂಬದಿಯಲ್ಲಿ ಒಬ್ಬ ಕ್ರೈಸ್ತ ಸಂನ್ಯಾಸಿ

ಒಂದು ಅಧಿಕೃತಪತ್ರ ಪಡೆದು, ಕಡೆಗೂ, ಅಥೋಸಿನೆಡೆಗೆ ಪ್ರಯಾಣ ಬೆಳೆಸಲು ನಾನು ಸನ್ನದ್ಧನಾದೆ.

## ಅಥೋಸ್ ಭೂಶಿರ ಮತ್ತು ಅಲ್ಲಿನ ಮಠಗಳು

ಗ್ರೀಕ್ ದೇಶದ ಉತ್ತರ ಕರಾವಳಿಯುದ್ದಕ್ಕೂ ಭೂಶಿರವೊಂದು ಹಬ್ಬಿದೆ. ಅದರ ದಕ್ಷಿಣ ತುದಿ ಮೂರು ಭಾಗಗಳಾಗಿ ಒಡೆದಿದೆ. ಅವುಗಳ ಪೂರ್ವಭಾಗದಲ್ಲಿ ದಟ್ಟಾರಣ್ಯದಿಂದ ಕೂಡಿದ ಪರ್ವತ ಶ್ರೇಣಿಯು ಪಿರಮಿಡ್ ರೂಪದಲ್ಲಿರುವ ಅಥೋಸ್ ಎಂಬ ಪರ್ವತಶಿಖರದಲ್ಲಿ ಕೊನೆಗೊಳ್ಳುವುದು. ಆ ಇಡೀ ಭೂಶಿರವನ್ನೇ **ಮೌಂಟ್ ಅಥೋಸ್** ಎಂದು ಕರೆಯುವರು. ಅಲ್ಲಿಯೇ ಸಂನ್ಯಾಸಿಗಳಿಗೇ ಮೀಸಲಾದ ಪ್ರದೇಶವಿರುವುದು. ಗ್ರೀಕ್ ದೇಶದಲ್ಲಿರುವ ಒಂದು ಸ್ವತಂತ್ರ ರಾಜ್ಯ ಅದು.

ಇಂದು ಪೌರಸ್ತ್ಯ ಚರ್ಚ್‌ಗೆ ಸೇರಿದ ಇಪ್ಪತ್ತು ಪ್ರಮುಖ ಸಂನ್ಯಾಸಿ ಮಠಗಳು ಅಲ್ಲಿವೆ. ಅವುಗಳಲ್ಲಿ ೧೭ ಗ್ರೀಕ್, ೧ ರಷಿಯನ್, ೧ ಸರ್ಬಿಯನ್ ಹಾಗೂ ಇನ್ನೊಂದು ಬಲ್ಗೇರಿಯನ್. ಇವುಗಳಲ್ಲಿ ಬಹು ಪುರಾತನವಾದ ಮಠಗಳನ್ನು ಕಟ್ಟಿದುದು ೧೦ನೆಯ ಶತಮಾನದಲ್ಲಿ. ಅವುಗಳಿಗೆ ಆ ಕಾಲದ ರಾಜರು, ಗಣ್ಯರು ಮತ್ತು ಶ್ರೀಮಂತರು ಧನಸಹಾಯ ಮಾಡಿದರು. ಶತಮಾನಗಳಿಂದ ತ್ಯಾಗಿಗಳ ಪಂಗಡಗಳು ಇಲ್ಲಿ ನೆಲೆಸಿ, ಅಭಿವೃದ್ಧಿ ಹೊಂದಿವೆ. ಕೆಲವು ಕಾಲಮಾನಗಳಲ್ಲಿ ಈ ಸಂನ್ಯಾಸಿಗಳ ಸಂಖ್ಯೆ ಗಣನೀಯವಾಗಿ ಕಮ್ಮಿಯಾದದ್ದುಂಟು. ಅಂತಹ ಒಂದು ಸಂದರ್ಭವೆಂದರೆ ೨ನೆಯ ಪ್ರಪಂಚ ಮಹಾಯುದ್ಧದ ನಂತರದ ಕಾಲಘಟ್ಟ. ಆದರೆ ಇತ್ತೀಚಿಗೆ, ಪರಿಸ್ಥಿತಿ ಸುಧಾರಿಸಿ, ಧಾರ್ಮಿಕತೆಯಲ್ಲಿ ಆಸಕ್ತಿ ಬೆಳೆದು ಸಂನ್ಯಾಸಿಗಳ ಸಂಖ್ಯೆ ಬೆಳೆಯುತ್ತಿದೆ. ಇನ್ನೊಂದು ಅಂಶವೆಂದರೆ, ಇಲ್ಲಿನ ಪ್ರತಿಯೊಂದು ಮಠವೂ ಒಂದಲ್ಲ ಒಂದು ಕಾಲದಲ್ಲಿ ಕಡಲುಗಳ್ಳರ ದಾಳಿಯಿಂದಲೊ, ಬೆಂಕಿ ಅನಾಹುತದಿಂದಲೊ ನಿರ್ನಾಮವಾಗಿರುವುದು. ಕಡಲುಗಳ್ಳರಿಂದ ರಕ್ಷಣೆ ಪಡೆಯಲೆಂದೇ ಇಲ್ಲಿನ ಮಠಗಳ ಕಟ್ಟಡಗಳು ಕೋಟೆಯ ರೀತಿ ಕಟ್ಟಲ್ಪಟ್ಟಿವೆ.

## ತ್ಯಾಗಿಗಳ ಜೀವನ ಪದ್ಧತಿ

ಇಲ್ಲಿನ ಇಪ್ಪತ್ತು ಮಠಗಳಲ್ಲಿರುವ ತ್ಯಾಗಿಗಳ ಜೀವನ ಪದ್ಧತಿಯೂ ವೈವಿಧ್ಯಮಯ. ಕೆಲವರು ಅತಿ ಕಠಿಣವಾದ ಮತ್ತು ಹಳೆಯದಾದ **ಸಿನೋಬೈಟ್** (*cenobite*) ಪದ್ಧತಿಯನ್ನು ಅನುಸರಿಸುತ್ತಾರೆ. ಇದರಲ್ಲಿ ಸಾಧುಗಳು ಒಟ್ಟಿಗೆ ಇರುತ್ತಾರೆ. ಒಟ್ಟಿಗೆ ಆಹಾರ ಸೇವಿಸುತ್ತಾರೆ. ಸಂನ್ಯಾಸಿ ಪಂಗಡಕ್ಕೊಬ್ಬರು ಮಹಂತರಿರುತ್ತಾರೆ(*Abbot*). ೧೪ನೆಯ ಶತಮಾನದ ಕಡೆಯ ಭಾಗದಲ್ಲಿ **ಇಡಿಯೋರ್‌ರಿತಮಿಕ್** (*idiorrhythmic*)ಪದ್ಧತಿಯು ಬೆಳೆಯಿತು. ಇದರಲ್ಲಿ, ಕೆಲವು ಹಬ್ಬದ ದಿನಗಳನ್ನು ಬಿಟ್ಟು ಮಿಕ್ಕ ದಿನಗಳಲ್ಲಿ ಸಾಧುಗಳು ಪ್ರತ್ಯೇಕವಾಗಿ ಅಡುಗೆ ಮಾಡಿಕೊಂಡು ಉಣ್ಣುತ್ತಾರೆ. ಅವರಿಗೆ ಸ್ವಲ್ಪ ಸ್ವಂತ ಆಸ್ತಿಯೂ ಇರುತ್ತದೆ ಮತ್ತು ಅವರು ಕಸುಬು ಮಾಡಿ ಹಣವನ್ನೂ ಸಂಪಾದಿಸಬಹುದು. ಈ ಬಗೆಯ ಮಠವನ್ನು ಆರಿಸಲ್ಪಟ್ಟ ಹಿರಿಯ ಸಾಧುಗಳ ಗುಂಪೊಂದು ನೋಡಿಕೊಳ್ಳುತ್ತದೆ. ಪ್ರಸ್ತುತ ಅಥೋಸ್ ಪರ್ವತದಲ್ಲಿ ೧೧ ಸಿನೋಬೈಟಿಕ್ ಮತ್ತು ೯ ಇಡಿಯೋರ್‌ರಿತಮಿಕ್ ಮಠಗಳು ಇವೆ.

ನಾನು ಹಿಂದೂ ಸಂನ್ಯಾಸೀ ಪದ್ಧತಿಗೂ, ಅಥೋಸ್ ಪರ್ವತದಲ್ಲಿ ನೆಲೆಸಿರುವ ಈ ಕ್ರೈಸ್ತ ಸಂನ್ಯಾಸಿಗಳ ಆಚರಣೆಗೂ ಹಲವಾರು ಸಾಮ್ಯಗಳಿರುವುದನ್ನು ಕಂಡುಕೊಂಡೆ. ಮೊದಲನೆಯದು, ಪ್ರಾರ್ಥನೆಯ ಬಗೆ. ಅವರು "*ಭಗವಾನ್ ಯೇಸು ಕ್ರಿಸ್ತನೇ, ನನ್ನಲ್ಲಿ ದಯೆ ತೋರು*"(*Lord Jesus Christ, have mercy on me*) ಎಂಬ ಯೇಸುವಿನ ಮೇಲಿನ ಪ್ರಾರ್ಥನೆಯನ್ನು ಸತತವಾಗಿ ಪುನರುಚ್ಚರಿಸುತ್ತಾರೆ. ಅವರಿಗೆ ಅದೇ ಪವಿತ್ರ ಮಂತ್ರವಾಗಿದೆ. ಈ ರೀತಿಯ ಮಂತ್ರಜಪ ಮತ್ತು ಅದರ ಮೂಲಕ ಆಂತರಿಕ ಪರಿವರ್ತನೆ ಹಿಂದೂ ಧರ್ಮಕ್ಕೆ ಹೊಸದೇನೂ ಅಲ್ಲ. ಎರಡನೆಯದು ಗುರು ಶಿಷ್ಯ ಸಂಬಂಧ. ಹಿಂದೂ ಸಂಪ್ರದಾಯದಂತೆಯೇ ಇಲ್ಲಿಯೂ ತನ್ನ ಆಧ್ಯಾತ್ಮಿಕ ಗುರುವಿನಲ್ಲಿ ನಿಷ್ಠೆ ಹಾಗೂ ನಿರ್ಭರತೆ ಅತಿ ಮುಖ್ಯ. ಮೂರನೆಯದು ಹಾಗೂ ಬಹು ಮುಖ್ಯವಾದುದು ಭಗವತ್ಸಾಕ್ಷಾತ್ಕಾರವೇ ಜೀವನದ ಲಕ್ಷ್ಯ ಎನ್ನುವ ನಂಬಿಕೆ. ಈ ಎರಡೂ ಸಂಪ್ರದಾಯಗಳಲ್ಲಿ ಭಗವತ್ಸಾಕ್ಷಾತ್ಕಾರವೆಂದರೆ, ಅಪರೋಕ್ಷವಾಗಿ ಹಾಗೂ ಸಂಪೂರ್ಣವಾಗಿ ಭಗವಂತನಲ್ಲಿ ಒಂದಾಗುವಿಕೆ.

## ರಾಜಧಾನಿ ಕಾರ್ಯಸ್


ಅಥೋಸ್ ಭೂಶಿರದ ಈಶಾನ್ಯ ದಿಕ್ಕಿನ ಕರಾವಳಿಯಲ್ಲಿ **ಎರಿಸ್ಸೋಸ್** (*Erissos*), ವಾಯವ್ಯ ದಿಕ್ಕಿನ ಕರಾವಳಿಯಲ್ಲಿ **ಒರಾನೋಪೊಲಿಸ್** (*Ouranopolis*)ಎಂಬ ಬಂದರು ಗ್ರಾಮಗಳಿವೆ. ಅವುಗಳಿಂದ, ಅಥೋಸ್ ಭೂಶಿರದ ಅಂಚಿನಲ್ಲಿರುವ ಮಠಗಳನ್ನು ಸಂದರ್ಶಿಸಲು ದೋಣಿಸೌಕರ್ಯ ಸಿಗುತ್ತದೆ. ಭೂಶಿರದ ಒಳಭಾಗದ ಮಠಗಳನ್ನು ತಲುಪಲು ಕಾಲುದಾರಿಗಳಿವೆ. ಈ ಬಂದರು ಗ್ರಾಮಗಳಿಂದಲೇ ಎಲ್ಲಾ ಮಠಗಳಿಗೂ, ಹೊರಪ್ರಪಂಚದಿಂದ, ಬೇಕಾದ ಸಾಮಗ್ರಿಗಳನ್ನು ದೋಣಿಗಳಿಂದ ತರಿಸಿಕೊಳ್ಳುವ ವ್ಯವಸ್ಥೆ ಇದೆ. ಈ ಭೂಶಿರದ ರಾಜಧಾನಿಯಾಗಿದೆ **ಕಾರ್ಯಸ್** (*Karyes*). ಈ ಪಟ್ಟಣಕ್ಕೆ ಮಾತ್ರ ಎರಡೂ ದಿಕ್ಕಿನ ಕರಾವಳಿ ಪ್ರದೇಶಗಳಿಂದ ಪಕ್ಕಾ ರಸ್ತೆ ಇದೆ.

ನಾನು ತುಂಬ ಮುಂಜಾನೆಯೇ, ಒರಾನೋಪೊಲಿಸ್‌ನಿಂದ ಹೊರಡುವ ಮೋಟಾರ್ ದೋಣಿಯನ್ನು ಹತ್ತಿದೆ. ನೀರ್ಗಲ್ಲುಗಳಿಂದ ಆವೃತವಾದ ಕರಾವಳಿಯ ರಮ್ಯ ದೃಶ್ಯವನ್ನು ಹಾಗೂ ಅದರಿಂದಾಚೆ ದಟ್ಟವಾಗಿ ಹಬ್ಬಿರುವ ವನಸಿರಿಯನ್ನು ಸವಿಯುತ್ತ , ಎರಡು ಗಂಟೆ ಕಾಲ ಪ್ರಯಾಣ ಮಾಡಿ ನಾವು ಡಾಫ್ನೆ (*Daphne*)ಎಂಬ ಗ್ರಾಮವನ್ನು ತಲುಪಿದೆವು. ಅಲ್ಲಿ ಬಸ್ಸೊಂದನ್ನು ಏರಿ, ಸುಮಾರು ೧೨ ಕಿಲೋಮೀಟರ್ ಪ್ರಯಾಣ ಮಾಡಿ **ಕಾರ್ಯಸ್** ಪಟ್ಟಣವನ್ನು ತಲುಪಿದೆವು. ಇದೇ ಅಥೋಸ್ ರಾಜ್ಯದ ಅಧಿಕಾರ ಸ್ಥಾನ. ಇಲ್ಲಿ ಗ್ರೀಕ್ ಸರ್ಕಾರದಿಂದ ನಿಯಮಿತನಾದ ರಾಜ್ಯಪಾಲನೊಬ್ಬನಿರುತ್ತಾನೆ. ಭೂಶಿರದ ಎಲ್ಲ ಇಪ್ಪತ್ತು ಮಠಗಳ ಪ್ರತಿನಿಧಿಗಳೂ ಇಲ್ಲಿ ನೆಲಸುತ್ತಾರೆ. ಪ್ರತಿ ವಾರ ಅವರೆಲ್ಲರೂ ಸಮಾವೇಶಗೊಂಡು, ಆಡಳಿತಾತ್ಮಕ ನಿರ್ಧಾರಗಳನ್ನು ಕೈಗೊಳ್ಳುತ್ತಾರೆ. ಸರ್ಕಾರದ ವ್ಯವಸ್ಥೆ ಪ್ರಜಾಸತ್ತಾತ್ಮಕ ರೀತಿಯಲ್ಲಿದ್ದು, ಪ್ರತಿ ಮಠವೂ ಸಮಾನ ಸ್ಥಾನಮಾನಗಳನ್ನೂ, ಅಧಿಕಾರವನ್ನೂ ಹೊಂದಿರುತ್ತದೆ. ಕಾರ್ಯಸ್ ಪಟ್ಟಣದಲ್ಲಿನ ನೀರವತೆ ನನ್ನ ಮನ ಸೆಳೆಯಿತು. ಇಲ್ಲಿ ಯಾವ

ಮೋಟಾರು ವಾಹನಗಳೂ ಇಲ್ಲ. ರೇಡಿಯೋ ಟೇಪ್ ರೆಕಾರ್ಡರ್‌ಗಳಿಗೆ ಅವಕಾಶವಿಲ್ಲ. ಸಂಗೀತದ ಶಬ್ದ, ಕೂಗುವುದು ಇಲ್ಲಿ ನಿಷಿದ್ಧ. ಪರಿಶುದ್ಧವಾಗಿದ್ದವು ರಸ್ತೆಗಳು. ಇದೇ ಬಗೆಯ ಶಾಂತ ವಾತಾವರಣವನ್ನು ಅಥೋಸ್ ಪರ್ವತ ಪ್ರದೇಶದಾದ್ಯಂತ ಕಂಡು ಆನಂದಪಟ್ಟೆ.

### ಪ್ರೋಟಾಟನ್ ಚರ್ಚ್

ಸಮುದಾಯದ ಕಚೇರಿಗೆ ಸ್ವಲ್ಪದೂರದಲ್ಲಿಯೇ, ಹಳೆಯ ಚರ್ಚ್ ಒಂದು ಇದೆ. ಅದರ ಹೆಸರು **ಪ್ರೋಟಾಟನ್ ಚರ್ಚ್** (*Church of Protaton*).ಅದು ಅಥೋಸ್‌ನಲ್ಲಿಯೇ ಬಹು ಮುಖ್ಯವಾದ ಚರ್ಚು ಹಾಗೂ ಅಥೋಸ್‌ನಲ್ಲಿರುವ ಎಲ್ಲ ಆಶ್ರಮಗಳಿಗೆ ಸೇರಿದ ಚರ್ಚು. ಅದನ್ನು ಕಟ್ಟಿದುದು ಕ್ರಿ.ಶ. ೯೬೫ರಲ್ಲಿ.ಇದರ ವೈಶಿಷ್ಟ್ಯವೆಂದರೆ ಒಳಗೋಡೆಗಳಲ್ಲಿ ಚಿತ್ರಿಸಿರುವ ಬೃಹದಾಕಾರದ ಭಿತ್ತಿಚಿತ್ರಗಳು (*Frescos*). ಅವುಗಳ ಕಲಾಕಾರ ೧೪ನೇ ಶತಮಾನದ **ವ್ಯಾನುಯೆಲ್ ಪಾನ್‌ಸೆಲಿನೋಸ್** (*Manuel Panselinos*). ಆ ಚಿತ್ರಗಳು ಪುಣ್ಯಪುರುಷರ ಹಾಗೂ ಅವರ ಜೀವನದ ಘಟನೆಗಳ ಕುರಿತಾಗಿ ಇವೆ. ಅವುಗಳಲ್ಲಿ ಕಂಡುಬರುವ ಆಧ್ಯಾತ್ಮಿಕ ತೇಜಸ್ಸನ್ನು ಕಂಡು ನಾನು ಬೆರಗಾದೆ. ಚಿತ್ರಗಳ ವ್ಯಕ್ತಿಗಳಲ್ಲಿ ಗಂಭೀರತೆ,ಅಸೀಮ ದಿವ್ಯ ಚಾರಿತ್ರ್ಯ, ತಪಸ್ಸು ಮತ್ತು ಅಲೌಕಿಕ ಪ್ರಭೆ ವ್ಯಕ್ತವಾಗುತ್ತಿತ್ತು. ವೃದ್ಧ ಸಾಧುಗಳ ಕೃಶ ಶರೀರಗಳ ಚಿತ್ರಣ, ಅವರ ಕಠಿಣ ತಪಶ್ಚರ್ಯೆಯ ದ್ಯೋತಕವಾಗಿತ್ತು. ಆ ಭಿತ್ತಿಚಿತ್ರಗಳ ಮುಂದೆ ನಿಂತವರ ಮನಸ್ಸಿನಲ್ಲಿ ಆ ಮಹಾಪುರುಷರ ಬಗ್ಗೆ ಅಗಾಧ ಗೌರವ ಮತ್ತು ಅವರ ದಾರಿಯಲ್ಲಿ ನಡೆಯಬೇಕೆಂಬ ಬಯಕೆ ಮೂಡದಿರಲು ಸಾಧ್ಯವಿರಲಿಲ್ಲ.



ಭಿತ್ತಿಚಿತ್ರ

### ಸ್ಟಾವ್ರೋನಿಕಿಟಾದ ಸಾಧು ಮಠ

ಮರುದಿನ ನಾನು ಕಾಲ್ನಡಿಗೆಯಲ್ಲಿ ಸ್ಟಾವ್ರೋನಿಕಿಟಾದ ಮಠಕ್ಕೆ (Monastery of Stavronikita)ತೆರಳಿದೆ. ಅಲ್ಲಿ ಒಳಹೋಗಲು ಕಾಯುತ್ತಿರುವಾಗ, ಹತ್ತಿರವೇ ಇದ್ದ ಸಾಧುಗಳ ಸ್ಮಶಾನಭೂಮಿಗೆ (Graveyard) ಹೋದೆ. ಅಲ್ಲಿ ಇತ್ತೀಚಿಗೆ ಮರಣಹೊಂದಿದ್ದ ಸಂನ್ಯಾಸಿಯೊಬ್ಬರ ಗೋರಿ ಇತ್ತು. ಅದರ ಮೇಲೆ ಮರದ ಶಿಲುಬೆ ಮತ್ತು ಅದಕ್ಕೆ ಜೋತು ಹಾಕಿದ ಆ ಸಾಧು ಉಪಯೋಗಿಸುತ್ತಿದ್ದ ಜಪಮಾಲೆ ಕಾಣುತ್ತಿತ್ತು. ಆ ಪುಣ್ಯಪುರುಷನ ಜೀವನದ ಬಗ್ಗೆ ನಾನು ಯೋಚಿಸುತ್ತಿರುವಾಗ, ಬೆಳ್ಳಗಿನ ಗಡ್ಡವಿರುವ ವೃದ್ಧ ಸಂನ್ಯಾಸಿಯೊಬ್ಬರನ್ನು ಕಂಡೆ. ಗೌರವಾನ್ವಿತರಾದ ಅವರಿಗೆ ಸಾಂಪ್ರದಾಯಿಕ ರೀತಿಯಲ್ಲಿ ವಂದನೆಗಳನ್ನು ಸಲ್ಲಿಸಿದೆ. ಆಶ್ಚರ್ಯವೆಂದರೆ ಅವರು



ನನ್ನನ್ನು ಇಂಗ್ಲೀಷ್ ಭಾಷೆಯಲ್ಲಿ ಸಂಬೋಧಿಸಿದರು. ಪಕ್ಕದ ದ್ವೀಪವೊಂದಕ್ಕೆ ಸೇರಿದ ಕ್ರೈಸ್ತ ಮಠವೊಂದರ ಬಿಷಪ್ (*Bishop*) ಆಗಿದ್ದರವರು. ಅವರ ಹೆಸರು ಇರಿನೋಸ್. ಅವರ ವದನದಿಂದ ಹೊರಸೂಸುತ್ತಿದ್ದ ಅಗಾಧ ಪ್ರಶಾಂತತೆ ಮತ್ತು ದಯೆಗಳನ್ನು ನಾನೆಲ್ಲೂ ಹಿಂದೆ ಕಂಡವನಲ್ಲ. ಅವರು ತಮ್ಮ ಜೊತೆಗೂಡಿ ಮಠಗಳನ್ನು ಸಂದರ್ಶಿಸುವಂತೆ ಹೇಳಿದರು. ಅವರ ಸಾನ್ನಿಧ್ಯದಿಂದ ನನಗೂ ಪಯಣ ಸುಗಮ ವಾಯಿತು. ಮರುದಿನ ಬೆಳಗಿನ ಉಪಾಹಾರವಾದೊಡನೆಯೇ, ಬಿಷಪ್‌ರೊಂದಿಗೆ ಕಾರ್ಯಸ್ ಪಟ್ಟಣಕ್ಕೆ ಮರಳಿ, ಬಂದರು ಗ್ರಾಮವಾದ ಢಾಫ್ನೆ ತಲುಪಿದೆವು.

### ಗ್ರಿಗೋರಿಯೊ ಸಾಧು ಮಠ




ಡಾಫ್ನೆಯಿಂದ ದೋಣಿಯಲ್ಲಿ ಪ್ರಯಾಣ ಬೆಳೆಸಿ ನಾವು ತಲುಪಿದ್ದು ಗ್ರಿಗೋರಿಯೊ ಸಾಧು ಮಠಕ್ಕೆ(*Holy Monastery of Grigoriou*). ಅಲ್ಲಿನ ಸಾಧುಗಳು ನಮ್ಮ ಪೂಜ್ಯ ಬಿಷಪ್‌ರನ್ನು ತುಂಬ ಗೌರವದಿಂದ ಬರಮಾಡಿಕೊಂಡರು. ಗ್ರಿಗೋರಿಯೊ ಮಠ ಸಿನೋಬೈಟ್ ಪದ್ಧತಿಯ ಮಠಗಳಲ್ಲಿಯೇ ತುಂಬ ಶಿಸ್ತುಪಾಲಿಸುವ ಮತ್ತು ಕಠಿಣ ತಪಶ್ಚರ್ಯೆಗೆ ಒತ್ತುಕೊಡುವ ಆಶ್ರಮವಾಗಿದೆ. ನಮ್ಮ ಬಿಷಪ್ ಅಲ್ಲಿದ್ದ ಇಂಗ್ಲೀಷ್ ಬಲ್ಲ ಸಾಧುವೊಬ್ಬರ ಭೇಟಿ ಮಾಡಿಸಿದರು. ಅವರನ್ನು ಪ್ರೀತಿಯಿಂದ **ಪಾಪಾಸ್** (Papas)ಎಂದು ಕರೆಯುತ್ತಿದ್ದರು. ನಾವಿಬ್ಬರೂ, ಹೊರ ಅಂಗಣದಲ್ಲಿದ್ದ ಆಲಿವ್ ಮರದ ಕೆಳಗೆ ಕುಳಿತು ಬಹುಕಾಲ ಮಾತುಕತೆಯಾಡಿದೆವು. ಬಹಳ ಆತ್ಮೀಯರಾಗಿಬಿಟ್ಟೆವು. ಪೆರು ದೇಶದ ಲಿಮಾ (Lima, Peru)ಎಂಬ

ದೂರದ ಸ್ಥಳದವರಾದ ಆ ಸಾಧು ತನ್ನ ತಾಯಿಯ ಬಗ್ಗೆ ಹೇಳಿಕೊಂಡರು. ಬದುಕಿನ ನಿಜವಾದ ಅರ್ಥವನ್ನು ಹುಡುಕುತ್ತಾ ಯುರೋಪಿನಾದ್ಯಂತ ಸಂಚರಿಸಿದ್ದರವರು. ಶ್ರದ್ಧಾಪೂರಿತೆಯಾದ ಹಾಗೂ ಪುತ್ರನ ಬಯಕೆಯನ್ನು ಅರ್ಥಮಾಡಿಕೊಂಡಿದ್ದ ಅವರ ಪುಣ್ಯಜನನಿ ಅವರಿಗೆ ನೀನು ಹುಡುಕುತ್ತಿರುವುದು ನಿನಗೆ ಲಭಿಸುವ ವರೆಗೂ ಮನೆಗೆ ಹಿಂದಿರುಗಿ ಬರಬೇಡ ಎಂದು ಪತ್ರ ಬರೆದರಂತೆ. ಆಕೆಗೆ ಚೆನ್ನಾಗಿ ಗೊತ್ತಿತ್ತು ತನ್ನ ಪುತ್ರ ತಾನು ಹುಡುಕುವುದನ್ನು ಗಳಿಸಿಕೊಂಡರೆ ಇನ್ನೆಂದಿಗೂ ತಿರುಗಿಬರಲಾರ ಎಂದು. ಪಾಪಾಸ್ ಹೇಳಿದರು 'ಅವಳಿಗಾಗಿ ಪ್ರತಿರಾತ್ರಿ ನಾನು ಪ್ರಾರ್ಥನೆ ಮಾಡುತ್ತೇನೆ. ನನಗೆ ಸ್ವಾತಂತ್ರ್ಯ ಕೊಟ್ಟ ಆಕೆಯ ಮಹಾನ್ ವಾತ್ಸಲ್ಯಕ್ಕೆ ನಾನು ಇಷ್ಟಾದರೂ ಋಣ ತೀರಿಸಬೇಕು. ಭಗವಂತನೇ ಅವಳಿಗೆ ನೀನು ಮಾಡುತ್ತಿರುವುದು ಸರಿ ಎಂದು ಆಶ್ವಾಸನೆಯಿತ್ತಿದ್ದಾನೆ ಎಂದು ನಾನು ನಂಬುತ್ತೇನೆ.' ಆ ಸಾಧು ಗ್ರಿಗೋರಿಯೊ ಮಠದಲ್ಲಿ ಹತ್ತು ವರ್ಷಗಳಿಂದ ನೆಲೆಸಿದ್ದಾರೆ. ಮರುದಿನ ಮುಂಜಾನೆಯ ಪ್ರಾರ್ಥನೆಯ ನಂತರ ನಾವು ಹೊರಡಲು ಸಿದ್ಧವಾದಾಗ ಪಾಪಾಸ್ ದೇವದಾರು ಮರದಿಂದ (*cedar wood*)ಮಾಡಿದ ಸಣ್ಣ ಶಿಲುಬೆ ಮತ್ತು ತನ್ನ ಮಠದ ಎರಡು ವರ್ಣಚಿತ್ರಗಳನ್ನು ಕೊಡುಗೆಯಾಗಿ ಇತ್ತರು. ಒಂದನ್ನು ನೀವಿಟ್ಟುಕೊಂಡು ಇನ್ನೊಂದನ್ನು ಅಥೋಸ್ ಪರ್ವತವನ್ನು ಪ್ರೀತಿಸುವ ಭಾರತದಲ್ಲಿರುವ ಸಂನ್ಯಾಸಿ ಸಹೋದರನೊಬ್ಬನಿಗೆ ಕಳುಹಿಸಿಕೊಡಿ ಎಂದರು.

## ಸಿಮೋನೋಪೆಟ್ರಾ ಸಾಧು ಮಠ




ದಿನದ ನಮ್ಮ ಪ್ರಯಾಣ ಆರಂಭವಾಯಿತು. ಕಡಿದಾದ ಕಲ್ಲುಗಳಿರುವ ಮಾರ್ಗದಲ್ಲಿ, ಎರಡು ಹೇಸರಗತ್ತೆಗಳ (mule) ಮೇಲೆ ಸಾಮಾನುಗಳನ್ನು ಹೊರಿಸಿಕೊಂಡು, ಎರಡು ಕಿಲೋಮೀಟರ್ ನಡೆದು ಸಿಮೋನೋಪೆಟ್ರಾ ಸಾಧು ಮಠವನ್ನು (*Monastery of Simonopetra*) ತಲುಪಿದೆವು. ಕ್ರಿಸ್ತ ಶಕ ೧೩ನೆಯ ಶತಮಾನದಲ್ಲಿ ಸಂತ ಸೈಮನ್ (*St. Simon*)ಎನ್ನುವ ತಪಸ್ವಿ, ಆ ಜಾಗದಲ್ಲಿರುವ ಗುಹೆಯೊಂದರಲ್ಲಿ ಸಾಧನೆ ಮಾಡುತ್ತಿದ್ದ. ಅವನಿಗೆ ದೊಡ್ಡ ನಕ್ಷತ್ರವೊಂದು ಅಲ್ಲಿನ ಕಡಿದಾದ ಬಂಡೆಯ ಮೇಲೆ ಮಠವೊಂದನ್ನು ಕಟ್ಟುವಂತೆ ಆದೇಶಿಸುವ ಅದ್ಭುತ ದರ್ಶನವಾಯಿತು. ಮೂವರು ಶ್ರೀಮಂತರ ಧನಸಹಾಯದಿಂದ ಭವ್ಯವಾದ ಕಟ್ಟಡ ನಿರ್ಮಾಣವಾಯಿತು. ಅವರು ಅವನ ಕೆಳಗೆ ಸಂನ್ಯಾಸಿಗಳಾದರು. ನಂತರ ಸರ್ಬಿಯಾದ ದೊರೆ, ತನ್ನ ಮಗಳ ವ್ಯಾಧಿಯನ್ನು ಸೈಮನ್ ಗುಣಪಡಿಸಿದುದಕ್ಕೆ ಕೃತಜ್ಞತೆಯನ್ನು ತೋರಿಸುವುದಕ್ಕಾಗಿ, ಆ ಮಠವನ್ನು ವಿಸ್ತಾರಗೊಳಿಸಿದ. ಸಂತ ಸೈಮನ್ ಎಂಬ ಹೆಸರಿನ ಬಂಡೆಯ ಮೇಲೆ ಬೃಹದಾಕಾರವಾಗಿ ನಿಂತಿರುವ ಏಳು ಅಂತಸ್ತುಗಳ ಮಠದ ಕಟ್ಟಡವು ಅಥೋಸ್ ಪರ್ವತದಲ್ಲಿಯೇ, ರಮಣೀಯವೂ ರುದ್ರ ಭೀಕರವೂ ಆಗಿದೆ. ಮೂರುಬಾರಿ ಅಗ್ನಿಗೆ ಆಹುತಿಯಾಗಿದ್ದ ಈ ಮಠದಲ್ಲಿ ಸಹಜವಾಗಿಯೇ ಹೆಚ್ಚು ಹಳೆಯ ಪುಸ್ತಕಗಳಾಗಲೀ ಇತರ ಸ್ಮಾರಕ ವಸ್ತುಗಳಾಗಲೀ ಇರಲಿಲ್ಲ.

ಇಲ್ಲಿಯೂ ನಮ್ಮ ಬಿಷಪ್ಪರನ್ನು ವೈಭವದಿಂದ ಬರಮಾಡಿಕೊಳ್ಳಲಾಯಿತು. ಅವರ ಗೌರವಾರ್ಥವಾಗಿ, ಚರ್ಚಿನ ಎಲ್ಲಾ ಭಾಗಗಳಲ್ಲಿಯೂ ಮೊಂಬತ್ತಿಗಳನ್ನು ಬೆಳಗಲಾಯಿತು. ದೀಪದ ಗೊಂಚಲುಗಳು ಪ್ರಜ್ವಲಿಸಿದವು. ಸೊಗಸಾದ ಸ್ತೋತ್ರಪಠಣ ಮತ್ತು ಧೂಪದೀಪಾದಿಗಳು, ಉನ್ನತ ಸ್ತರದ ಆಧ್ಯಾತ್ಮಿಕತೆಯ ವಾತಾವರಣವನ್ನು ಸೃಷ್ಟಿಸಿದವು. ಮಠದ ಪ್ರಾಂಗಣದಲ್ಲಿಯೆ ಇದ್ದ ಸಂತ ಸೈಮನ್‌ನು ತಪಸ್ಸು ಮಾಡುತ್ತಿದ್ದ ಗುಹೆಯನ್ನು ಸಂದರ್ಶಿಸಿದೆವು.

## ಲಾವ್ರಾ ಸಾಧು ಮಠ

ಮರುದಿನ ನಮ್ಮ ಪ್ರಯಾಣ ಭೂಶಿರದ ದಕ್ಷಿಣದ ತುದಿಯಲ್ಲಿರುವ ಲಾವ್ರಾದ ಭವ್ಯ ಮಠ ಅಥವಾ ಮೆಜಿಸ್ಟಿಸ್ ಲಾವ್ರಾ ಮಠದೆಡೆಗೆ (*Grand Monastery of Lavra or Megistis Lavra*) ಸಾಗಿತು. ಅದು ಅಥೋಸ್‌ನಲ್ಲಿಯೇ ಅತಿ ಹಳೆಯ ಮತ್ತು ದೊಡ್ಡ ಮಠ. ಇದನ್ನು ಕ್ರಿ.ಶ. ೯೬೩ರಲ್ಲಿ ಸಂತ ಅಥನಾಸಿಯೋಸ್ (*St. Athanasios,the Athonite*)ಸ್ಥಾಪಿಸಿದರು. ನಾವು ಈ ಮಠದ ವಾರ್ಷಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲು ಹೊರಟಿದ್ದೆವು. ಆ ದಿನದ ಪ್ರಾರ್ಥನಾ ಸಭೆ ಸತತವಾಗಿ ೧೫ ಗಂಟೆ ನಡೆಯಿತು. ನಮ್ಮ ಬಿಷಪ್ ಅದರಲ್ಲಿ ಪಾಲ್ಗೊಂಡರು. ಶಾರೀರಿಕವಾಗಿ ಅತಿ ಶ್ರಮದಾಯಕವಾಗಿದ್ದರೂ, ಆ ಪ್ರಾರ್ಥನಾಸಭೆ ಆಧ್ಯಾತ್ಮಿಕವಾಗಿ ಪ್ರಫುಲ್ಲಗೊಳಿಸಿದ್ದನ್ನು ನಾನು ಬಿಷಪ್ಪರಲ್ಲಿ ಕಂಡೆ. ಪ್ರಾರ್ಥನಾ ಸಭೆಯ ಅಂತ್ಯದಲ್ಲಿ ಪೂಜನೀಯ ಬಿಷಪ್, ಚರ್ಚಿನ ಪಕ್ಕದಲ್ಲಿದ್ದ ದೊಡ್ಡ ಪವಿತ್ರ ಬುಗ್ಗೆಯ ನೀರನ್ನು ನೆರೆದವರ ಮೇಲೆ ಚಿಮುಕಿಸಿ ಆಶೀರ್ವದಿಸಿದರು. ನಂತರ ಭವ್ಯ ಔತಣವಿತ್ತು.

ಲಾವ್ರಾ ಸಾಧು ಮಠದ ಅಧೀನದಲ್ಲಿ ಹಲವಾರು ಏಕಾಂತ ವಾಸದ ಕುಟೀರಗಳಿವೆ (*Hermitages*). ಬಾನೆತ್ತರಕ್ಕೆ ಕಡಿದಾಗಿ ನಿಂತಿರುವ ಪರ್ವತಶಿಖರಗಳಲ್ಲಿ ಪೊಟರೆಗಳಂತೆ ಇರುವ, ಸಂನ್ಯಾಸಿಗಳು ಇಂದಿಗೂ ನೆಲಸುವ ನೆಲಕೋಣೆ(*Cellar*)ಗಳೂ ಇವೆ. ಸಾಧನೆಯ ಮಾರ್ಗದಲ್ಲಿ ಗಮನಾರ್ಹ ಪ್ರಗತಿಯನ್ನು ತೋರಿಸಿರುವ ಸಾಧುಗಳಿಗೆ ಮಾತ್ರ ಈ ಬಗೆಯ ಏಕಾಂತವಾಸವನ್ನು ಮಾಡಲು ಅನುಮತಿ ನೀಡುತ್ತಾರೆ. ನೆಲಕೋಣೆಗಳಲ್ಲಿ ಸಾಧುಗಳು ಅಡುಗೆ ಮಾಡಿ ಕೊಳ್ಳುವುದಿಲ್ಲ. ಪರ್ವತಶಿಖರದ ಮೇಲ್ತುದಿಯಿಂದ ಆಹಾರ ತುಂಬಿದ ಬುಟ್ಟಿಗಳನ್ನು ಹಗ್ಗಕ್ಕೆ ಕಟ್ಟಿ ಇಳಿಯಬಿಡುತ್ತಾರೆ ಅಥವಾ ಕೆಳಗಿನಿಂದ ಮೇಲಕ್ಕೆ ಕಳುಹಿಸುತ್ತಾರೆ. ಸಾಮಾನ್ಯವಾಗಿ, ಇವುಗಳಲ್ಲಿ ನೆಲೆಸಿರುವ ಸಂನ್ಯಾಸಿಗಳು ಹೊರಗಿನ ಜನರ ಸಂಪರ್ಕದಿಂದ ದೂರ ಇರುತ್ತಾರೆ. ತಮ್ಮ ಸಮಯವನ್ನು ಪ್ರಾರ್ಥನೆ ಅಧ್ಯಯನಗಳಲ್ಲಿ ಕಳೆಯುತ್ತಾರೆ. ಕೆಲವರು ಮರದ ಶಿಲುಬೆಗಳನ್ನು

ಅಥವಾ ಉಣ್ಣೆಯ ಜಪಮಾಲೆಗಳನ್ನು ತಯಾರಿಸುವುದರಲ್ಲಿ ಸ್ವಲ್ಪ ಕಾಲವನ್ನು ವಿನಿಯೋಗಿಸುತ್ತಾರೆ. ಯುವಸಾಧುಗಳು ಒಮ್ಮೊಮ್ಮೆ ಆಧ್ಯಾತ್ಮಿಕ ಮಾರ್ಗದರ್ಶನವನ್ನು ಪಡೆಯಲು ಅವರನ್ನು ಸಂದರ್ಶಿಸುತ್ತಾರೆ.

**ಬಿಷಪ್ ಇರಿನೋಸರಿಂದ ವಿದಾಯ**

ನಮ್ಮ ನಂತರದ ಸ್ಥಳ ಕ್ಸೆನೋಫೋನ್‌ಟೋಸ್‌ನಲ್ಲಿನ ಮಠ (*Holy Monastery of Xenophontos*). ಇದು ಸಮತಟ್ಟಾದ ಸಾಗರದಂಡೆಯಲ್ಲಿದೆ. ಇಲ್ಲಿನ ಕಟ್ಟಡಗಳನ್ನು ಕ್ರಿ.ಶ.೧೮೦೯ ಮತ್ತು ೧೮೧೯ರ ಮಧ್ಯದ ಕಾಲಾವಧಿಯಲ್ಲಿ ನಿರ್ಮಿಸಲಾಯಿತು.

ಅಂದಿನ ರಾತ್ರಿಯೇ ನಾನು ಪೂಜ್ಯ ಬಿಷಪ್‌ರೊಂದಿಗೆ ಕಳೆದ ಕಡೆಯ ರಾತ್ರಿ. ಅವರು ಸಣ್ಣದೊಂದು ಅತಿಥಿಗೃಹಕ್ಕೆ ನನ್ನನ್ನು ಕರೆದರು. ನಾವಿಬ್ಬರು ಸಮುದ್ರವನ್ನೇ ನೋಡುತ್ತ ಮಹಡಿಯಲ್ಲಿ ಕುಳಿತೆವು. ಅವರು ನನ್ನ ಮೇಲೆ ತೋರಿದ ಕಾರುಣ್ಯಕ್ಕೆ ಧನ್ಯವಾದ ಹೇಳಲು ಇದು ನನಗೆ ಸಿಕ್ಕ ಕಡೆಯ ಅವಕಾಶವಾಗಿತ್ತು. ಅವರು ಇದೆಲ್ಲ ಭಗವಂತನ ವ್ಯವಸ್ಥೆಯಿಂದ ನಡೆದಿರುವುದು ಎಂದರು. ನಾನು ಧನ್ಯತೆಯ ಭಾವವನ್ನು ಅನುಭವಿಸಿದೆ. ನಂತರ ಅವರು ಕ್ರೀಟ್ (Crete) ದ್ವೀಪದಲ್ಲಿನ ತಮ್ಮ ಪ್ರಶಾಂತ ಆಶ್ರಮಕ್ಕೆ ಯಾವ ಸಮಯದಲ್ಲಿಯಾದರೂ ಬಂದು ಸಾಧನೆ ಮಾಡಬಹುದೆಂದು ನನಗೆ ಮುಕ್ತ ಆಹ್ವಾನವನ್ನಿತ್ತರು. ಮುಂದಿನ ಪಯಣವನ್ನು ನಾನು ಒಬ್ಬಂಟಿಗನಾಗಿ ಮಾಡಬೇಕಾಯಿತು. ನನ್ನ ಮನಸ್ಸಿನ ತುಂಬ ಮಹಾತ್ಮರಾದ ಆ ಬಿಷಪ್ಪರೇ ತುಂಬಿದ್ದರು. ಅವರ ಸಂಸರ್ಗ ಮತ್ತು ಉದಾತ್ತ ನಡುವಳಿಕೆಗಳಿಂದ ನಾನು ಬಹಳಷ್ಟು ಕಲಿತೆ.



ಬಿಷಪ್ ಇರಿನೋಸ್

**ಕಡೆಯ ದಿನಗಳು**

ಹಿಂದಿನ ದಿನ ದೋಣಿಯಲ್ಲಿ ಪಯಣಿಸುತ್ತಿದ್ದಾಗ ಸಂತ ಪಾನ್ಟೈಲೈಮನ್ ಮಠವನ್ನು (Monastery of St.Panteleimon) ದೂರದಿಂದ ನೋಡಿದ್ದೆವು. ಅದು ರಷಿಯನ್ನರ ಮಠ. ೧೮೭೫ರಲ್ಲಿ ಕಟ್ಟಲ್ಪಟ್ಟ ಆ ಮಠದಲ್ಲಿ, ೧೮೯೫ರ ಹೊತ್ತಿಗೆ ೧೦೦೦ಕ್ಕೂ ಹೆಚ್ಚು ರಷಿಯನ್ ಸಾಧುಗಳು ವಾಸಿಸುತ್ತಿದ್ದರಂತೆ. ಈಗ ಕೇವಲ ಕೆಲವೇ ಸಂನ್ಯಾಸಿಗಳು ಇಲ್ಲಿದ್ದಾರೆ. ಇಲ್ಲಿ ರಷಿಯನ್ ಸಂಪ್ರದಾಯದ ಪರಿಚಯ ನಮಗಾಗುವುದು. ಪ್ರಾರ್ಥನಾ ಸಭೆಗಳು ಸ್ಲಾವೋನಿಕ್ ಮತ್ತು ರಷಿಯನ್ ಭಾಷೆಗಳಲ್ಲಿ ನಡೆಯುತ್ತವೆ. ಇಲ್ಲಿನ ವಿಶೇಷವೆಂದರೆ, ಅಥೋಸ್ ಪರ್ವತದಲ್ಲಿಯೇ ಅತಿ ದೊಡ್ಡದಾದ ಘಂಟೆ. ಅದರ ತೂಕ ೧೦ ಟನ್ನಿನಷ್ಟು.

ನಂತರ ಪೂಜ್ಯ ಬಿಷಪ್ಪರು ಆದೇಶವಿತ್ತಂತೆ ನಾನು ಸಂತ ನಿಕಾಲೋಸ್ ಬರಾಜೆರಿಯ ಕೆಲಿಯನ್‌ಗೆ (*Kellion of St. Nicholos Buragari*) ಇನ್ನೊಮ್ಮೆ ಹೋದೆ. ಅಲ್ಲಿನ ಸಂನ್ಯಾಸಿಗಳ ಜೊತೆಗೆ ಒಡನಾಡಿದೆ. ಅವರ ಜೀವನ ಪದ್ಧತಿ, ನಿಷ್ಠೆ ಹಾಗೂ ಕಠಿಣ ಸಾಧನೆಯ ಪ್ರತ್ಯಕ್ಷ ಪರಿಚಯ ಮಾಡಿಕೊಂಡೆ. ಸತತವಾಗಿ ನಡೆಯುತ್ತಲೇ ಇರುವ ಅವರ ಪ್ರಾರ್ಥನೆಯ ಗಂಭೀರ ಧ್ವನಿಯನ್ನು ರಾತ್ರಿಯಲ್ಲೂ ಆಲಿಸುತ್ತ ಸ್ಫೂರ್ತಿ ಹೊಂದಿದೆ.



ಸಂತ ನಿಕಾಲೋಸ್ ಬರಾಜೆರಿಯ ಕೆಲಿಯನ್‌ಯಲ್ಲಿರುವ ಮೇರಿ ಮತ್ತು ಶಿಶು ಏಸುವಿನ ಮೂರ್ತಿ

**ಭಾರತದತ್ತ ಪಯಣ**

ಅಥೋಸ್ ಪರ್ವತದ ಯಾತ್ರೆಯು ಮತ್ತೊಮ್ಮೆ ಭಾರತಕ್ಕೆ ಹೋಗಿ, ನನ್ನ ಉಳಿದ ರಜಾದಿನಗಳನ್ನು ಅಲ್ಲಿನ ನಮ್ಮ ರಾಮಕೃಷ್ಣ ಆಶ್ರಮಗಳಲ್ಲಿ ಕಳೆದು ಅಧ್ಯಾತ್ಮಿಕ ಲಾಭವನ್ನು ಹೊಂದಬೇಕೆಂಬ ಇಚ್ಛೆಯನ್ನು ನನ್ನಲ್ಲಿ ಮೂಡಿಸಿತು. ಅದರಂತೆಯೇ ನನ್ನ ಆಶ್ರಮವಾದ ಹಾಲಿವುಡ್ ಕೇಂದ್ರದ ಮುಖ್ಯಸ್ಥರಾದ ಸ್ವಾಮಿ ಸ್ವಾಹಾನಂದರಿಗೆ ಕೇಬಲ್ ಕಳುಹಿಸಿದೆ. ಎರಡು ದಿನಗಳಲ್ಲಿಯೇ ಅವರಿಂದ ಆಶೀರ್ವಾದ ಪೂರ್ವಕ ಅನುಮತಿ ದೊರಕಿತು. ನಾನು ಭಾರತಕ್ಕೆ ಹೊರಡಲು ಸಿದ್ಧನಾದೆ.

ನನ್ನ ಪಾಲಿಗೆ, ಅಥೋಸ್ ಪುಣ್ಯ ಪರ್ವತದ ಯಾತ್ರೆಯು ರಾಮಕೃಷ್ಣ ಸಂಪ್ರದಾಯದ ಸಂನ್ಯಾಸಿಗಳು ಅನುಸರಿಸುವ ಸಾಧನಾ ಪದ್ಧತಿಗೂ, ಗ್ರೀಕ್ ಸಾಂಪ್ರದಾಯಿಕ ಚರ್ಚ್‌ನ ಸಾಧುಗಳ ಆಚರಣೆಗಳಿಗೂ ಇರುವ ಸಾಮ್ಯಗಳ ಪರಿಚಯ ಮಾಡಿಸಿತು. ಇದರಿಂದ ನಾನು ಕಲಿತ ಬಹು ಮುಖ್ಯ ಪಾಠವೆಂದರೆ, ಯಾವುದೇ ಧಾರ್ಮಿಕ ಮಾರ್ಗದಲ್ಲಿ ಸಾಗುತ್ತಿರುವ ಸಾಧಕರು ನಿಷ್ಠಾವಂತರಾಗಿ ನಿಜವಾಗಿಯೂ ಭಗವತ್ಸಾಕ್ಷಾತ್ಕಾರಕ್ಕಾಗಿ ಹಂಬಲಿಸುತ್ತಿದ್ದರೆ, ಅವರುಗಳ ಮಧ್ಯದ ತಾತ್ವಿಕ ಭೇದಗಳು ನಗಣ್ಯ ಎಂಬ ಸತ್ಯ. ವೇದಾಂತಿಗಳಾದ ನಾವು ಬೌದ್ಧಿಕವಾಗಿ ಇದನ್ನು ಅರಿತಿದ್ದೇವೆ. ಆದರೆ, ನಮ್ಮದಲ್ಲದ ಇನ್ನೊಂದು ಧರ್ಮದ ಪರಿಸರದಲ್ಲಿ ಆ ಸತ್ಯವನ್ನು ಕಂಡುಕೊಳ್ಳಬೇಕು. ನಮ್ಮ ಧ್ಯೇಯದ ಬಗ್ಗೆ ನಮಗೆ ಮತ್ತೊಮ್ಮೆ ನೆನಪು ಮಾಡಿಕೊಡುವ ಈ ಶಕ್ತಿದಾಯಕ ಅನುಭವ ನಮಗೆಲ್ಲರಿಗೂ ಆವಶ್ಯಕವಾದುದು.